

ಗುರು: ಮಕ್ಕಳೇ, ನಿಮಗೆಲ್ಲ ಏಕಲವ್ಯನ ಗುರುಭಕ್ತಿ. ಬಗ್ಗೆ ಹಿಂದಿನ ವಾರದಲ್ಲಿ ತಿಳಿಸಿದ್ದೆ. ನಿಮ್ಮಲ್ಲೂ ಅವನಂತೆ ಗುರುಭಕ್ತಿ ಇದೆಯೇ ಎಂದು ತಿಳಿಯುವಾಸೆ. ಯಾರೆಲ್ಲಾ ತಯಾರಿದ್ದೀರಿ?

ಮಕ್ಕಳು: ಯಾರೂ ಇಲ್ಲ ಗುರುಗಳೇ (ಒಕ್ಕೊರಲಿನಿಂದ ಕೂಗಿದರು).

ಗುರು: ಏಕೆ, ನಿಮ್ಮಲ್ಲಿ ಗುರುಭಕ್ತಿ ಇಲ್ಲವೇ?

ಮಕ್ಕಳು: ಹಾಗಲ್ಲ ಗುರುಗಳೇ, ಏಕಲವ್ಯನ ಕಾಲದಲ್ಲಿ ಮೊಬೈಲ್ ಇರಲಿಲ್ಲ. ಈಗ ಬೆರಳುಗಳಿಲ್ಲದೆ ಮೊಬೈಲ್ ಆಪರೇಟಿಂಗ್ ಮಾಡಲಾಗಲ್ಲ!

ಮೇಷ್ಟ್ರು: ಚಿಕನ್, ಅಂದರೆ ಕೋಳಿ ಮರಿ ರಸ್ತೆಯನ್ನು ಏಕೆ ಕ್ರಾಸ್ ಮಾಡಿತು?

ತಿಮ್ಮು: ಏಕೆಂದರೆ ಅದಕ್ಕೆ ಕಿಚನ್‌ನಲ್ಲಿ ಚಿಕನ್ ಬಿರಿಯಾನಿಯಾಗುವ ಆಸೆಯಿರಲಿಲ್ಲ.

★★★

ಅಮ್ಮ: ಇದ್ಯಾಕೋ ಮಗಾ. ಸೊಳ್ಳೆಗಳನ್ನು ಓಡಿಸುವ 'ಆಲ್ ಔಟ್'ಗೆ ಲಿಕ್ವಿಡ್ ಬಾಟಲಿ ಸಿಗಿಸದೆ ಸುಮ್ಮನೆ ಖಾಲಿ ಉರಿಸ್ತಿದೀಯಾ?

ತಿಮ್ಮು: ಅಮ್ಮ, ಔಷಧಿ ಜೊತೆಗೆ ಲೈಟ್ ಇರೋದನ್ನು ಸೊಳ್ಳೆಗಳು ದಿನಾ ನೋಡಿ ಎಚ್ಚೆತ್ತುಕೊಂಡಿರುತ್ತವೆ. ಅದ್ಕೆ ಇವತ್ತು, ಲಿಕ್ವಿಡ್ ಬಾಟಲಿ ತೆಗೆದು ಬರೀ ಆ ಲೈಟ್ ಹಾಕಿ ಸೊಳ್ಳೆಗಳನ್ನು ಕನ್‌ಫ್ಯೂಸ್ ಮಾಡಿ ಕೊಲ್ಲೋ ಉಪಾಯ ಮಾಡಿದ್ದೀನಿ!

(ಸಂಗ್ರಹ) ಸುಮಣ್ಣ

ಅಪ್ಪ: ಒಂದು ಕೆಲಸ ನೆಟ್ಟಗೆ ಮಾಡೋಕ್ಕಾಗಲ್ವಾ. ಕೊತ್ತಂಬರಿಸೊಪ್ಪು ತಗೊಂಡು ಬಾರೋ ಅಂದ್ರೆ ಪುದೀನಾ ತಂದಿದ್ದೀಯಲ್ಲೋ? ಅವೆರಡಕ್ಕೆ ವ್ಯತ್ಯಾಸ ಗೊತ್ತಿಲ್ವಾ? ನಿನ್ನಂಥವನನ್ನು ಮನೆಯಿಂದ ಹೊರಗೆ ಹಾಕಬೇಕು.

ಮಗ: ಬನ್ನಿ ಅಪ್ಪ ಇಬ್ಬರೂ ಒಟ್ಟಿಗೇ ಹೋಗೋಣ.

ಅಪ್ಪ: ಯಾಕೋ?

ಮಗ: ಯಾಕಂದ್ರೆ ಅಮ್ಮ ಹೇಳಿದ್ಲು, ಇದು ಮೆಂತೆ ಸೊಪ್ಪಂತೆ!

★★★

ಒಮ್ಮೆ ಒಬ್ಬ ರಾಜನಿಗೆ ತನ್ನ ನಾಡಿನಲ್ಲಿ 'ಹೆಂಡತಿ ಹೇಳಿದಂತೆ ಕೇಳುವವರು' ಹಾಗೂ 'ಹೆಂಡತಿ ಹೇಳಿದಂತೆ ಕೇಳದವರು' ಎಷ್ಟು ಜನರಿದ್ದಾರೆಂದು ತಿಳಿಯುವ ಆಸೆಯಾಯಿತಂತೆ. ಹಾಗೆಯೇ ಊರಿನಲ್ಲಿರುವ ಎಲ್ಲಾ ಪುರುಷರನ್ನೂ ಬರಹೇಳಿ 'ಹೆಂಡತಿ ಹೇಳಿದಂತೆ ಕೇಳುವವರು' ಹಾಗೂ 'ಹೆಂಡತಿ ಹೇಳಿದಂತೆ ಕೇಳದವರು' ಎಂಬ ಎರಡು ಸರತಿಯನ್ನು ಮಾಡಲು ಹೇಳಿದ. ಒಬ್ಬನನ್ನು ಬಿಟ್ಟು, ಮಿಕ್ಕೆಲ್ಲಾ ಪುರುಷರೂ 'ಹೆಂಡತಿ ಹೇಳಿದಂತೆ ಕೇಳುವವರು' ಸಾಲಿನಲ್ಲಿ ನಿಂತರು. ರಾಜ ಆಶ್ಚರ್ಯದಿಂದ ಆ ಒಬ್ಬನಿಗೆ 'ಗಂಡೆಂದರೆ ನೀನೇ, ನೀನೊಬ್ಬನೇ ಹೆಂಡತಿ ಹೇಳಿದಂತೆ ಕೇಳದವನು' ಎಂದನು. ಆಗ ಆತನು 'ಮಹಾರಾಜ ನನ್ನ ಹೆಂಡತಿ ಇದೇ ಸಾಲಿನಲ್ಲಿ ನಿಲ್ಲಲು ಅಪ್ಪಣೆ ಮಾಡಿದ್ದಳು' ಎಂದ. ರಾಜ ಸುಸ್ತು!

(ಸಂಗ್ರಹ) ಪೂರ್ಣಿಮಾ ಆರ್. ಹೆಜಮಾಡಿ, ಸಾಂಗ್ಲಿ


